**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**S.C. No. 274/2024**

| | | | |
|---|---|---|---|
| ಸಾಕ್ಷಿಯ ಹೆಸರು | ಶ್ರೀ. ಬ್ಯಾಟರಾಜು | ಚಾಸಾಃ | ಪ್ರಾಸಾಃ |
| ತಂದೆಯ ಹೆಸರು | ಹನುಮಯ್ಯ | 7 | 5 |
| ವಯಸ್ಸು | 32 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **03.03.2026.** | |
| ಉದ್ಯೋಗ | ಖಾಸಗಿ ಉದ್ಯೋಗಿ | | |
| ವಾಸ ಸ್ಥಳ | ಗಿರಿಗೌಡನನದೊಡ್ಡಿ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನನಗೆ ಆರೋಪಿತರು ಗೊತ್ತು. ಪಿರ್ಯಾದಿ ದೇವರಾಜ್ ಮತ್ತು ಮಹದೇವ್ ಗೊತ್ತು. ನಾವು ಎಲ್ಲರೂ ಒಂದೇ ಊರಿನವರು. ದಿನಾಂಕ 19.04.2024 ರಂದು ನಾನು ಪ್ರತೀ ದಿನದಂತೆ ಕೆಲಸ ಮುಗಿಸಿಕೊಂಡು ರಾತ್ರಿ 10.00 ಕ್ಕೆ ಗಿರಿಗೌಡನನದೊಡ್ಡಿ ಊರು ಒಳಗಿನ ರಸ್ತೆಯಲ್ಲಿ ಬರುತ್ತಿದ್ದಾಗ ಮಹದೇವ್ ರವರು ಆ್ಯಕ್ಟೀವ್ ಹೊಂಡಾದಲ್ಲಿ ಬಂದರು. ಎಲ್ಲಾ ಆರೋಪಿತರು ಸದರಿ ವಾಹನವನ್ನು ಅಡ್ಡಗಟ್ಟಿದ್ದರು. 3 ನೇ ಆರೋಪಿ ಮಹದೇವ್ ಗೆ ಕೈಗಳಿಂದ ಹೊಡೆದು ಕೆಳಗೆ ಬಿಳಿಸಿದ. ಅಕ್ಕ ಪಕ್ಕ ಇದ್ದ ದೊಣ್ಣೆ, ಪೈಪ್ ಹಾಗೂ ಕಲ್ಲುಗಳಿಂದ ಮಹದೇವ್ ನ ಬೆನ್ನು, ಭುಜ ಮತ್ತು ಇತರ ಕಡೆಗಳಲ್ಲಿ ಹೊಡೆದರು. ಆರೋಪಿ ನಂ. 5 ರವರು ಕಲ್ಲನ್ನು ಎತ್ತಿ ಗಾಡಿ ಮೇಲೆ ಹಾಕಿದ. 4 ನೇ ಆರೋಪಿ ಮಹದೇವ್ ಗೆ ಹೊಡೆಯಿರಿ ಎಂದು ಪ್ರಚೋದನೆ ನೀಡುತ್ತಿದ್ದರು. ನಾನ ಸುರೇಶ್ ಹೋಗಿ ಅವರ ತಂದೆ ದೇವರಾಜ್ ರವರನ್ನು ಕರೆದುಕೊಂಡು ಬರಲು ಹೋದೆವು. ನಂತರ ಆತನನ್ನು ದಯಾನಂದ ಆಸ್ಪತ್ರೆಗೆ ಕರೆದುಕೊಂಡು ಹೋದರು. ಮಹದೇವ್ ರವರಿಗೆ ಪ್ರಜ್ಞೆ ತಪ್ಪಿದ್ದು ಮೈ ಎಲ್ಲಾ ರಕ್ತ ಗಾಯಗಳು ಆಗಿತ್ತು. ಸಾಕ್ಷಿ ಮು.ಮಾ. 1 ರಿಂದ 5 ಅನ್ನು ನೋಡಿ ಗುರುತಿಸಿರುತ್ತಾರೆ. ಮು.ಮಾ. 5 ಮಹದೇವ್ ರವರ ಶರ್ಟ ಆಗಿದ್ದು ಅದು ಪೂರ್ತಿ ರಕ್ತವಾಗಿತ್ತು. ದ್ವಿಚಕ್ರ ವಾಹನದ ಮುಂಭಾಗದ ಬಾಡಿ ಜಖಂಗೊಂಡಿತ್ತು. ಪೋಲೀಸರು ನನ್ನ ಹೇಳಿಕೆ ದಾಖಲು ಮಾಡಿದ್ದರು.

ಪಾಟೀ ಸವಾಲುಃ ಆರೋಪಿತರ ಪರ : SSG ವಕೀಲರಿಂದ :

ಸಮಯ ಕೋರಿದ್ದು,  ರೂಪಾಯಿ 500/- ಖರ್ಚಿನೊಂದಿಗೆ ಮುಂದೂಡಲಾಯಿತು.

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.